THE MYSORE LEGISLATIVE ASSEMBLY.

FIFTEENTH DAY.

Saturday, 5th July 1952.

The House met in the Assembly Hall, Old Public Offices, Bangalore, on Saturday, 5th July 1952 at Thirty Minutes Past Eight of the Clock.

Mr. Speaker (Sri H. Siddaiya, B.A., B.L.) in the Chair.

QUESTIONS AND ANSWERS.

Prevention of Animal Sacrifices.

Q.—54. **Sri T. HANUMAIAH** (Hiriyur—Scheduled Castes).—

Will the Government be pleased to state:—

(*a*) whether the provisions of the Mysore Prevention of Animal Sacrifices Act have been brought into effect in all parts of the State and if so, from what date;

(*b*) whether they are aware that sacrificing of he-buffaloes, sheep and goats is going on without any restriction all over the State;

(*c*) whether any such cases were brought to the notice of the authorities;

(*d*) the number of prosecutions launched and how many ended in conviction;

(*e*) whether there is any staff employed to keep watch over the offenders of this kind?

A.—(*a*) **Sri Kadidal MANJAPPA** (Minister for Revenue and Public Works).—

(*a*) Yes, with effect from 24th July 1948.

(*b*) No.

(*c*) A few stray cases of violation have come to notice and have been suitably dealt with.

(*d*)—

District	Number of prosecutions	Convictions	Acquittals	Pending	Withdrawn
1 Kolar ...	32	25	3	4	...
2 Mysore ...	1	...	1	...	...
3 Hassan ...	...	...	...	...	...
4 Mandya ...	...	...	...	...	...
5 Tumkur ...	44	25	...	19	...
6 Chikmagalur	...	...	...	...	...
7 Chitaldrug ...	13	8	5		...
8 Bangalore ...	...	...	...	...	...
9 Shimoga ...	1	...	...	...	1
Total ...	91	58	9	23	1

(*e*) No special staff is employed. The existing police staff are entrusted with this work.

ಶ್ರೀ ಟಿ. ಹನುಮಯ್ಯನವರು.—(ಎ) ಪ್ರಶ್ನೆಗೆ ಉತ್ತರವಾಗಿ ಈ ಕಾನೂನನ್ನು 1948ನೆಯ ಜುಲೈ 24 ನೆಯ ತಾರೀಖಿನಿಂದ ಜಾರಿ ಮಾಡಲಾಗಿದೆಯೆಂದು ತಿಳಿಸಿದ್ದೀರಿ. ಗ್ರಾಮಾಂತರಗಳಲ್ಲಿರುವ ಪಟೇಲ್ ಶಾನುಭೋಗರುಗಳಿಗೂ ಈ ಕಾನೂನಿನ ನಿಯಮಾವಳಿಗಳನ್ನು ಕಳುಹಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಪ್ರತಿಯೊಬ್ಬರಿಗೂ ಗೊತ್ತಿದೆ.

ಶ್ರೀ ಟಿ. ಹನುಮಯ್ಯನವರು.—ದೇವಿ ಜಾತ್ರೆಗಳು ಗ್ರಾಮಗಳಲ್ಲಿ ನಡೆಯುವಾಗ ಲೈಸೆನ್ಸ್ ಪಡೆದು ಮಾಡುತ್ತಾರೋ ಅಥವಾ ಹಾಗೆಯೇ ಮಾಡುತ್ತಾರೊ? ಅನುಮತಿ ತೆಗೆದುಕೊಳ್ಳುತ್ತಾರೆಯೇ?

Sri Kadidal MANJAPPA.— That does not arise

ಶ್ರೀ ಟಿ. ಹನುಮಯ್ಯನವರು.—ಇನ್ನು ಮೇಲಾದರೂ ಈ ಕಾನೂನಿನ ನಿಯಮಗಳನ್ನು ಎಲ್ಲರಿಗೂ ತಿಳಿಯುವಂತೆ ಪ್ರಚಾರ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಈಗಾಗಲೇ ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯನವರು.—ಹಾಸನ, ಮಂಡ್ಯ, ಚಿಕ್ಕಮಗಳೂರು–ಈ ಜಿಲ್ಲೆಗಳಲ್ಲಿ ಯಾವ ಕೇಸುಗಳನ್ನೂ ಹಾಕಿಲ್ಲವೆಂದು ಉತ್ತರದಲ್ಲಿ ತಿಳಿಸಿದೆ. ಎಂದರೆ ಅಲ್ಲಿ ಎಲ್ಲಯೂ ಪ್ರಾಣಿಬಲಿ ಆಗಿಲ್ಲವೆಂತಲೆ!

ಶ್ರೀ ಕಡಿದಾಳ್ ಮಂಜಪ್ಪನವರು.—ಹಾಗೆ ಭಾವಿಸಬಹುದು.

ಶ್ರೀ ಆರ್. ಅನಂತರಾಮ್ ಅವರು (ಚಾಮರಾಜಪೇಟೆ).—ಕಾನೂನಿಗೆವಿರುದ್ಧವಾಗಿ ಪ್ರಾಣಿಬಲಿ ಮಾಡಿದರೆ ಏನು ಶಿಕ್ಷೆ ವಿಧಿಸುತ್ತಾರೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಕಾನೂನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಆರ್. ಅನಂತರಾಮ್ ಅವರು.—ಕಾನೂನಿನಲ್ಲಿ ವಿಧಿಸಿರುವ ಶಿಕ್ಷೆ ಕಡಮೆಯೆಂಬುದು ಗಮನಕ್ಕೆ ಬಂದಿದೆಯೆ!

ಶ್ರೀ ಕಡಿದಾಳ್ ಮಂಜಪ್ಪನವರು.—ಸರಿಯಾಗಿದೆಯೆಂದು ನಮ್ಮ ಅಭಿಪ್ರಾಯ.

ಶ್ರೀ ವಿ. ಮಸಿಯಪ್ಪನವರು (ಹಿರಿಯೂರು).—ಇಂಥಾ ಪ್ರಾಣಿವಧೆಯ ಕೃತ್ಯಗಳು ನಡೆಯುವುದು ದೇವಿ ಜಾತ್ರೆಗಳಲ್ಲಲ್ಲವೆ!

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಮಾನ್ಯವಾಗಿ ಅಲ್ಲೇ.

ಶ್ರೀ ವಿ. ಮಸಿಯಪ್ಪನವರು.—ಇಂಥಾ ಜಾತ್ರೆಗಳನ್ನು ಲೈಸೆನ್ಸ್ ಇಲ್ಲದೆ ಮಾಡಬಾರದೆಂದು ನಿಯಮ ಮಾಡಿದರೆ ಇದು ಸರಿಯಾಗುತ್ತದೆಯಲ್ಲವೆ!

ಶ್ರೀ ಕಡಿದಾಳ್ ಮಂಜಪ್ಪನವರು.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಎಸ್. ರುದ್ರಪ್ಪನವರು (ಹೊನ್ನಾಳಿ).—ಕೋರಾರ್, ತುಮಕೂರು ಜಿಲ್ಲೆಗಳಲ್ಲಿ ಜಾಸ್ತಿಯಾಗಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪನವರು.—ಕಾನೂನು ಉಲ್ಲಂಘನೆ ಮಾಡುವವರ ಸಂಖ್ಯೆ ಜಾಸ್ತಿ ಇರಬಹುದು.

ಶ್ರೀ ಎಚ್. ಎಸ್. ರುದ್ರಪ್ಪನವರು — ಸಮಾಜ ಸುಧಾರಣೆಗೆ ಸಂಬಂಧಪಟ್ಟ ಕಾನೂನುಗಳು ಸರಿಯಾಗಿ ನಡೆಯುತ್ತವೆಯೋ ಇಲ್ಲವೋ ಎಂಬ ಬಗ್ಗೆ ಪೀರಿಯಾಡಿಕಲ್ ರಿಪೋರ್ಟುಗಳನ್ನು ತರಿಸುತ್ತೀರಾ ? ಜನರು ಅವುಗಳನ್ನು ಹೇಗೆ ಉಪಯೋಗಿಸುತ್ತಿದ್ದಾರೆ ಎಂಬ ಬಗ್ಗೆ ವರದಿಗಳನ್ನು ತರಿಸಿ, ಸರ್ಕಾರದವರು ತಿಳಿದುಕೊಳ್ಳುತ್ತಾರೆಯೆ ?

Sri Kadidal MANJAPPA—Sir, it is too wide a question. We cannot get reports in respect of working of all the enactments in force in the Mysore State. We cannot, for instance, get such reports in respect of the proper working of the provisions of the Indian Penal Code and other enactments.

Sri H. S. RUDRAPPA.—In respect of social reforms, I said, not in respect of Penal Code.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ಹುಲಿಯೂರುದುರ್ಗ).—ತುಮಕೂರು ಜಿಲ್ಲೆಯಲ್ಲಿ ಎಲ್ಲಾ ಜಿಲ್ಲೆಗಳಿಗಿಂತಲೂ ಹೆಚ್ಚಾಗಿ ನಡೆದಿದೆಯೆಂದು ಇಲ್ಲಿ ತಿಳಿಸಿದೆ, ತಾಲ್ಲೂಕುವಾರು ಹೇಳಲು ಸಾಧ್ಯವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ದನಗಳನ್ನು ಕುಯ್ಯುವುದು ಹೆಚ್ಚಾಗಿದೆ ಎಂಬುದು ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಗೊತ್ತಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಿಂದೆ ಹೋಂಗಾರ್ಡುಗಳಿದ್ದಾಗ ಇಂಥಾ ಕೆಲಸ ಮಾಡಿದವರನ್ನು ಹಿಡಿದುಕೊಟ್ಟರೂ ಅವರನ್ನು ಬಿಟ್ಟುಬಿಟ್ಟಿರುವುದು ಸರ್ಕಾರಕ್ಕೆ ವರದಿಯಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗಲೂ ನಡೆಯುತ್ತಿರುವುದನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ಮುಂದೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಲು ಏರ್ಪಾಡು ಮಾಡುತ್ತೀರಾ?

(ಉತ್ತರವಿಲ್ಲ.)

ಶ್ರೀ ಬಿ. ರಾಚಯ್ಯನವರು (ಯಳಂದೂರು–ಅನುಸೂಚಿತ ಜಾತಿಗಳು).—ಸಮಾಜ ಸುಧಾರಣೆಗಳ ವಿಷಯದಲ್ಲಿ ಸರ್ಕಾರದವರು ಪ್ರಚಾರಕ್ಕೆ ಏರ್ಪಾಡು ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ವಯಸ್ಕರ ಶಿಕ್ಷಣ ಶಾಖೆಯವರು ಮಾಡುತ್ತಾರೆ.

ಶ್ರೀ ಬಿ. ರಾಚಯ್ಯನವರು.—ಸೇವಾದಳದವರು ಮಾಡುತ್ತಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಸ್ಥಳಗಳಲ್ಲಿ ಮಾಡುತ್ತಿದ್ದಾರೆ.

Levy of Water Rate according to the provisions of Irrigation Act.

Q.—213. Sri B. P. NAGARAJA MURTHY (Malavalli).—

Will the Government be pleased to state :—

(*a*) whether they have levied water rate according to the provisions of the Irrigation Act ;